ಕೊಳಗಳ ರೆಕ್ಕವನ್ನು ನಾವು ಇಡುವುದಿಲ್ಲ. ಅವರೂ ಇಡುವುದಿಲ್ಲ. ಹಣ ಇದ್ದಾಗ ಜನಗಳಿಗೆ ಕೆಲಸ ಕೊಡುವ ದೃಷ್ಟಿಯಿಂದ ಕೊಳಗಳ ರಿಪೇರಿಯನ್ನು ಮಾಡಿಸಬಹುದು. ಆದರೆ ತಾಲ್ಲೂನಲ್ಲರ ತಕ್ಕ ಎರಾ್ಲ ಕೊಳಗಳ ಅಂಕಿ ಅಂಶಗಳನ್ನು ಎಲ್ಲೂ ಇಟ್ಟಿಲ್ಲ.

Irrigation wells allotted to Chitradurga District during 1962-63 and 1963-64 under liberalised scheme.

*Q.—238. Sri G. DUGGAPPA (Holalkere).—

Will the Government be pleased to state :—

(*a*) the number of irrigation wells allotted to Chitradurga District during 1962-63 and 1963-64 under liberalised scheme ;

(*b*) the number of applications received for the sanction of irrigation wells from Chitradurga District during the above period (talukwise figures may be given) ;

(*c*) the number of irrigation wells sanctioned in the above Dirtrict during 1962-63 and 1963-64 (talukwise figures may be given) ?

*A.—Sri M. V. KRISHNAPPA (Minister for Revenue).—

(*a*) 1962-63 1963-64
1,192 234

(*b*) and (*c*) The appended statement contains the required information.

STATEMENT

	Taluk	Number of applications received for sanction of irrigation wells from Chitradurga District (talukwise figures)		Number of irrigation wells sanctioned in Chitradurga District (talukwise figures)	
		1962-63	1963-64	1962-63	1963-64
1	Chitradurga	425	604	301	42
2	Challakere	345	380	210	35
3	Hiriyur	450	180	303	5
4	Molakalmuru	247	202	158	13
5	Davanagere	84	116	29	5
6	Harihar	87	121	84	5
7	Hosadurga	45	30	20	12
8	Holalkere	140	120	82	15
9	Jagalur	18	75	16	Nil

ಶ್ರೀ ಜಿ. ದುಗ್ಗಪ್ಪ.—1962-63ನೇ ಸಾಲಿನಲ್ಲಿ ಚಿತ್ರದುರ್ಗ ಜಿಲ್ಲೆಗೆ ಮಂಜೂರಾಗಿರುವ ನೀರಾವರಿ ಬಾವಿಗಳ ಸಂಖ್ಯೆ 1,192 ಆದರೆ 1963-64ನೇ ಸಾಲಿನಲ್ಲಿ ನೀರಾವರಿ ಬಾವಿಗಳಿಗೆ ಗೋನ್ಯರ ಜನಗಳಿಂದ 1,824 ಅರ್ಜಿಗಳು ಬಂದಿದ್ದಾಗ್ಯೂ ಕೇವಲ 234 ಬಾವಿಗಳು ಮಾತ್ರ ಮಂಜೂರಾಗಿವೆ. ಇದಕ್ಕೆ ಕಾರಣವೇನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಮೊದಲನೇ ವರ್ಷ ಕೊಟ್ಟಿದ್ದ ಬಾವಿಗಳನ್ನು ಮುಗಿಸಬೇಕಾದರೆ 18 ಲಕ್ಷ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಆದ್ದರಿಂದ ಹಿಂದಿನ ಸಾರಿ ಸ್ಯಾರಂಭ ಮಾಡಿದ್ದ ಬಾವಿಗಳನ್ನು ಮುಗಿಸಿ, ಹೊಸದಾಗಿ ಬಾವಿಗಳನ್ನು ಕೊಡಬೇಕಾದರೆ ಸ್ವಲ್ಪ ಕಡಮೆ ಮಾಡಬೇಕಾಗುತ್ತದೆ. ಹಿಂದಿನ ಸಾರಿ ಪ್ರಾರಂಭ ಮಾಡಿದ್ದ ಬಾವಿಗಳನ್ನು ಮುಗಿಸುವುದು ಮುಖ್ಯ.

ಶ್ರೀ ಬಿ. ಎಲ್. ಗೌಡ.—ಚಿತ್ರದುರ್ಗ ಜಿಲ್ಲೆಯಲ್ಲಿ ಬಾವಿಗಳು ಪೂರ್ತಿ ಆಗದೆ ಇರುವುದಕ್ಕೆ ಕಾರಣ ಅಲ್ಲಿ ಸರ್ಕಾರದವರು ಎರಡು ಮತ್ತು ಮೂರನೇ ಕಂತಿನ ಹಣವನ್ನು ಕೊಡದೆ ಇರುವುದು ಎಂಬುದು ತಮಗೆ ಗೊತ್ತಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆದಕ್ಕೆ ಅನೇಕ ಕಾರಣಗಳಿವೆ. ಸಾಮಾನ್ಯವಾಗಿ ಅಲ್ಲಿ ಕೆರೆಗಳು ಪಕ್ಕದಲ್ಲಿರುತ್ತವೆ. ಬಾವಿಗಳಲ್ಲಿ ನೀರನ್ನು ಬೇಲ್‌ಔಟ್ ಮಾಡುವುದಕ್ಕಾಗುವುದಿಲ್ಲ, ಹಾಗೆಯೇ ಬಿಟ್ಟು ಬಿಡುತ್ತಾರೆ. ಅನೇಕ ಕಡೆ 3 ಸಾವಿರ ರೂಪಾಯಿಗಳಿಗೆ ಬಾವಿ ಆಗುವುದಿಲ್ಲ. ನಾವು ಕೊಡುವ ಹಣ ಅವರಿಗೆ ಸಾಕಾಗುವುದಿಲ್ಲ. ಬೇರೆ ಕಡೆ ಅವರಿಗೆ ಸಾಲ ಸಿಕ್ಕುವುದಿಲ್ಲ. ಈ ಕಾರಣಗಳಿಂದ ಆ ಕೆಲಸಗಳು ನಿಧಾನವಾಗುತ್ತವೆ. ಒಂದೇ ವರ್ಷಕ್ಕೆ ಮುಗಿಸಬೇಕೆಂದಿದ್ದರೂ ಅನೇಕ ಸಂದರ್ಭಗಳಲ್ಲಿ 3-4 ವರ್ಷ ಎಕ್ಸ್‌ಟೆಂಡ್ ಮಾಡುತ್ತಾ ಬಂದಿದ್ದಾರೆ. ಮತ್ತು ಮಾನ್ಯ ಸದಸ್ಯರು ಹೇಳಿದಂತೆ, ಕೆಲವು ಸಂದರ್ಭಗಳಲ್ಲಿ 2-3 ಕಂತುಗಳನ್ನು ಕೊಡದೆ ಇರುವುದು ಕಾರಣವಾಗುತ್ತದೆ. ಈ ವರ್ಷ 2-3 ಕಂತುಗಳಿಗೆ 18 ಲಕ್ಷ ರೂಪಾಯಿಗಳನ್ನು ಕೊಟ್ಟು ಹೊಸ ಬಾವಿಯನ್ನು ಕಡಮೆ ಮಾಡಿದ್ದೇವೆ.

Sri GANJI -VEERAPPA: Is it not a fact that 5,000 applications asking for loans for new wells are pending with the Deputy Commissioner of Chitradurga District ?

ಶ್ರೀ ಎಂ. ವಿ. ಕೃಷ್ಣಪ್ಪ.—ಬೆಂಗಳೂರು ಡಿವಿಜನ್ನಿನಲ್ಲಿ 5 ಜಿಲ್ಲೆಗಳೂ ಬಹಳ ಬಾವಿಗಳು ಇರುವ ಜಿಲ್ಲೆಗಳು. ಬಳ್ಳಿಕೆರಿ, ಚಿತ್ರದುರ್ಗ, ತುಮಕೂರು, ಬೆಂಗಳೂರು ಮತ್ತು ಕೋಲಾರ ಈ 5 ಜಿಲ್ಲೆಗಳಲ್ಲಿ ಪೂರ್ತಿ ಬಾವಿಗಳಿವೆ. ನಂಜಾನಕ್ಕೆಲ್ಲಾ ಕೊಡುವ ಬಾವಿಗಳಲ್ಲಿ ಅರ್ಧ ಭಾವಿಗಳನ್ನು ಇಲ್ಲಿಯೇ ಕೊಡುತ್ತೇವೆ. ಬಾವಿಗಳಿಗೋನ್ಯರ ಕೊಡತಕ್ಕ ಎರಡು ಕೋಟಿ ರೂಪಾಯಿಗಳಲ್ಲಿ ಒಂದು ಕೋಟಿ ರೂಪಾಯಿಗಳನ್ನು ಈ ಒಂದು ಡಿವಿಜನ್ನಿನಲ್ಲಿಯೇ ಕೊಡುತ್ತೇವೆಂದು ಕೆಲವರು ಆಪಾದನೆ ಮಾಡುತಾತ್ತೆ. ಆದ್ದರಿಂದ ಬಾವಿಗಳು ಇರುವುದು ಈ 5 ಡಿಸ್ಟ್ರಿಕ್ಟ್‌ಗಳಲ್ಲಿ. ಈ ಜಿಲ್ಲೆಗಳಿಗೆ ಹೆಚ್ಚಿಗೆ ಬಾವಿಗಳನ್ನು ಕೊಟ್ಟರೂ ಇನ್ನೂ ಅನೇಕ ಸಾವಿರ ಅರ್ಜಿಗಳು ಉಳಿದಿರುತ್ತವೆ.

ಶ್ರೀ ಬಿ. ಎಲ್. ಗೌಡ.—ಈ ಪ್ರಾಂತದಲ್ಲಿ ಮಳೆಯ ಅಭಾವ ಇರುವುದು ತಮಗೆ ಗೊತ್ತಿದೆ. ಅಭಾವ ಪರಿಸ್ಥಿತಿಯಲ್ಲಿ ಅಭಾವ ಪರಿಹಾರ ಕಾರ್ಯಗಳನ್ನು ತೆಗೆದುಕೊಳ್ಳಬೇಕಾಗಿದೆ. ಈ ದೃಷ್ಟಿಯಿಂದ ಈಗ ಪೆಂಡಿಂಗ್ ಇರುವ ಅರ್ಜಿಗಳನ್ನೆಲ್ಲ ಮಂಜೂರು ಮಾಡಿ ಹಣವನ್ನು ಕೊಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ರೀತಿ ಮಾಡುವುದಕ್ಕೆ ನಮಗೂ ಉತ್ಸಾಹವಿದ್ದರೂ ಅದಕ್ಕೆ ದುಡ್ಡು ಇರಬೇಕು. ಹೋದ ವರ್ಷ ಒಂದೂ ಮುಕ್ಕಾಲು ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಇಟ್ಟಿದ್ದರು. ಅದೂ ಹಿಂದಿನ ವರ್ಷ ತೆಗೆದುಕೊಂಡ ಬಾವಿಗಳ ಕೆಲಸವನ್ನು ಪೂರ್ಯೆಸುವುದಕ್ಕೆ ಖರ್ಚಾಯಿತು. ಈ ವರ್ಷ 95 ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ, ಅದೂ ಒಟ್ಟು ರಾಜ್ಯಕ್ಕೆ. ಹೋದ ವರ್ಷ ಪುರು ಮಾಡಿರುವ ಬಾವಿಗಳನ್ನು ಪೂರ್ಯೆಸಬೇಕಾದರೆ ಇನ್ನೂ ಹೆಚ್ಚು ದುಡ್ಡು ಬೇಕು. ಅದ್ದರಿಂದ ಹೊಸ ಬಾವಿಗಳಿಗೆ ಕೊಡಬೇಕಾದರೆ ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ನೋಡಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಈಗ ಕೊಡತಕ್ಕ ಮೂರು ಸಾವಿರ ರೂಪಾಯಿಗಳಿಂದ ಅನೇಕ ಬಾವಿಗಳನ್ನು ಪೂರ್ಯೆಸುವುದಕ್ಕಾಗುವುದಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿರುವುದರಿಂದ ಇದನ್ನು ಹೆಚ್ಚು ಮಾಡುವುದಕ್ಕೆ ಏನಾದರೂ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಾ ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬಾವಿಗಳಿಗಾಗಿ ಹಣ ಕೇಂದ್ರ ಸರ್ಕಾರದಿಂದ ಬರತಕ್ಕದ್ದು. ನಾವು ಅವರನ್ನು ಈ ವಿಷಯದಲ್ಲಿ ಕೇಳಿದ್ದೇವೆ. ಮೊದಲು ಒಂದು ಸಾವಿರ ರೂಪಾಯಿವರಗೂ ಕೊಡುತ್ತಿದ್ದರು. 1961ರಿಂದ ಅದನ್ನು ಮೂರು ಸಾವಿರ ರೂಪಾಯಿ ಮಾಡಿದ್ದಾರೆ. ಈಗ ಇದನ್ನು ಐದು ಸಾವಿರ ರೂಪಾಯಿ ಮಾಡಬೇಕೆಂದು ಮುಖ್ಯ ಮಂತ್ರಿಗಳು ಕೇಂದ್ರಕ್ಕೆ ಬರೆದಿದ್ದಾರೆ.

ಇನ್ನೂ ಹೆಚ್ಚು ಹಣ ಕೊಡಬೇಕೆಂದು ನಾವು ಕೂಡ ಸಂಬಂಧಪಟ್ಟ ಇಲಾಖೆಗಳೊಂದಿಗೆ ಪತ್ರವ್ಯವಹಾರ ನಡೆಸುತ್ತಿದ್ದೇವೆ.

ಶ್ರೀ ಜಿ. ಎ. ಗೌಡ.—ಈಗ ಒದಗಿಸಿರುವ 95 ಲಕ್ಷ ರೂಪಾಯಿಗಳು ಹಳೆಯ ಬಾವಿಗಳಿಗೆ ಸಾಕಾಗುವುದಿಲ್ಲವೆಂದು ಹೇಳಿದಿರಿ. ಒದಗಿಸಿರುವ ಹಣವನ್ನು ಕೂಡ ರಿಲೀಸ್ ಮಾಡಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಎಷ್ಟು ಬಾವಿಗಳನ್ನು ಪುರು ಮಾಡಿದ್ದೀರಿ ಎಷ್ಟು ಕಂತುಗಳನ್ನು ಕೊಟ್ಟಿದ್ದೀರಿ, ಈಗ ತಗೆದುಕೊಂಡಿರುವ ಬಾವಿಗಳನ್ನು ಪೂರ್ತಿ ಮಾಡಬೇಕಾದರೆ ಎಷ್ಟು ದುಡ್ಡು ಬೇಕು ಎಂದು ಪ್ರತಿ ಜಿಲ್ಲೆಯಿಂದಲೂ ವಿವರಗಳನ್ನು ಕೇಳಿದ್ದೇವೆ. ಇನ್ನೂ ವಿವರಗಳು ನಮಗೆ ಬಂದಿಲ್ಲ. ಅವರಿಂದ ರಿಪೋರ್ಟ್ ಬರುವುದನ್ನು ಕಾದು 60 ಲಕ್ಷ ರೂಪಾಯಿವರೆಗೂ ಆಡ್‌ಹಾಕ್ ಗ್ರಾಂಟನ್ನು ಕೊಟ್ಟಿದ್ದೇವೆ.

ಶ್ರೀ ಜಿ. ದುಗ್ಗಪ್ಪ.—ಮಾನ್ಯ ಮಂತ್ರಿಗಳು ಇದೇ ಸಭೆಯಲ್ಲಿ ಬಾವಿಗಳಿಗೆ ಸಾಲ ಕೊಡುವುದರ ನಂಬಂಧದಲ್ಲಿ ರೂಲ್ಸ್ ಅನ್ನು ಸ್ವಲ್ಪ ನಡಿಲ ಮಾಡುತ್ತೇವೆಂದು ಹೇಳಿರುವುದರಿಂದ ಜನಗಳಿಗೆ ಬಾವಿ ತೋಡಿಸಬೇಕೆಂಬ ಬಗ್ಗೆ ಆಸಕ್ತಿ ಹೆಚ್ಚಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಅಭಾವವಿರುವುದರಿಂದ, ಅಲ್ಲಿಯ ಬಾವಿಗಳಲ್ಲಿ ನೀರಿಲ್ಲದೇ ಇರುವುದೆಂದ, ಇದನ್ನು ತುರ್ತುಪರಿಸ್ಥಿತಿ ಎಂದು ಪರಿಗಣಿಸಿ ಹೆಚ್ಚಿನ ಪ್ರಾಧಾನ್ಯತೆಯನ್ನು ಕೊಟ್ಟು ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ, ಸ್ವಾಮಿ ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರು ಹೇಳಿದುದನ್ನು ಒಪ್ಪಿಕೊಳ್ಳುತ್ತೇನೆ. ನಾವು ಬಾವಿಗಳಿಗೆ ವಿಶೇಷವಾಗಿ, ಬಹಳ ಉದಾರವಾಗಿ ಎಷ್ಟು ಸಾಧ್ಯವೋ ಅಷ್ಟನ್ನೂ ಕೊಡಬೇಕೆಂಬ ಉದ್ದೇಶದಿಂದ ಕೇಂದ್ರ ಸರ್ಕಾರಕ್ಕೂ ಬರೆದಿದ್ದೇವೆ. ಈಚೆಗೆ ಬಾವಿಗಳನ್ನು ತೋಡುವುದಕ್ಕೆ ಸಹಾಯ ಮಾಡುವುದಲ್ಲದೆ ಪಂಪು ಸೆಟ್ಟ್‌ಗಳಿಗೆ ಸಹ ಹಣವನ್ನು ಕೊಡುತ್ತಿದ್ದೇವೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹಣದ ಅಭಾವವಿದೆ ಎಂದು ಹೇಳಿದರು. ದೇಶದಲ್ಲಿ ದೊಡ್ಡ ದೊಡ್ಡ ಕಟ್ಟಡಗಳನ್ನು ಕಟ್ಟುವುದರ ಬದಲು ಸಾಮಾನ್ಯ ರೈತನಿಗೆ ಬೆಳೆ ಬೆಳೆಯಲು ಅನುಕೂಲವಾಗ ತಕ್ಕ ಬಾವಿಗಳಿಗೆ ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಬಾವಿಗಳಿಗೆ ಹೆಚ್ಚು ಹಣವನ್ನು ಕೊಡಬೇಕು ಎನ್ನುವುದೇ ಸರ್ಕಾರದ ನೀತಿ.

ಶ್ರೀ ಟಿ. ಎನ್. ಮಾದಪ್ಪ ಗೌಡ.—ಬೆಂಗಳೂರು ಡಿವಿಜನ್‌ನಲ್ಲಿ ಯಾವುದೂ ಹೊಳೆ ಇಲ್ಲ, ಆದ್ದರಿಂದ ಇಲ್ಲಿ ಬಾವಿಗಳಿಗೆ ಹೆಚ್ಚು ಹಣ ಕೊಡಲಾಗುತ್ತಿದೆ ಎಂದು ಹೇಳಿದರು. ರಾಜ್ಯದ ಬಾಕಿ ಕಡೆಯೂ ಆ ರೀತಿ ಹೊಳೆ ಇಲ್ಲದೆ ಪ್ರದೇಶಗಳಿವೆ. ಅಲ್ಲಗೂ ಬಾವಿಗಳಿಗೆ ಸರಿಯಾಗಿ ಹಣವನ್ನು ಕೊಡದೆ ಇದ್ದರೆ ಅವರ ಗತಿ ಏನು ?

ಶ್ರೀ ಎಂ. ವಿ. ಕೃಷ್ಣಪ್ಪ.—ಮಂಡ್ಯ ಜಿಲ್ಲೆಯಲ್ಲ ಕಾವೇರಿ ನದಿ ಹರಿದು ನೀರಾವರಿ ವ್ಯವಸಾಯ ಬಾದರೂ ಅಲ್ಲಯೂ ಒಂದೆರಡು ತಾಲ್ಲೂಕುಗಳಲ್ಲ ನೀರಾವರಿ ಸೌಲಭ್ಯವಿಲ್ಲ ಎನ್ನುವುದು ಗೊತ್ತಿದೆ. ಮಂಡ್ಯ ಜಿಲ್ಲೆಯ ನಾಗಮಂಗಲ ಮತ್ತು ಕೃಷ್ಣರಾಜಪೇಟೆ ತಾಲ್ಲೂಕುಗಳು ಚಿತ್ರದುರ್ಗ ಅಥವಾ ಕೋಲಾರ ಜಿಲ್ಲೆಗಳ ಯಾವ ತಾಲ್ಲೂಕಿಗೂ ಕಡಮೆ ಇಲ್ಲವೆಂದು ತಿಳಿದು ಆ ತಾಲ್ಲೂಕುಗಳಿಗೆ ಕೊಡುವ ಹಾಗೆಯೇ ತಾಲ್ಲೂಕು ಮಟ್ಟದಲ್ಲ ಹಣವನ್ನು ಕೊಡುತ್ತಿದ್ದೇವೆ.

Opening of a Feeder channel from Jinigehalla to Naikanahatti Hirekere.

*Q.—330. Sri B. L. GOWDA (Challakere).—

Will the Government be pleased to state :—

(a) whether there is a demand by the ryots of Naikanahatti and surrounding villages for opening a feeder channel from Jinigehalla to Naikanahatti Hirekere ;

(b) whether plans and estimates have been prepared in this behalf;

(c) at what stage this project is pending now ?